KAUK620007202012

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.**

**-: ಉಪಸ್ಥಿತರು:-**

ಶ್ರೀ ಈರಣ್ಣ ಹುಣಶಿಕಟ್ಟಿ.,

ಬಿ.ಕಾಂ.,ಎಲ್.ಎಲ್.ಬಿ.,

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ

ಪ್ರ.ದ.ನ್ಯಾ ದಂಡಾಧಿಕಾರಿ, ಹೊನ್ನಾವರ .

**ದಿನಾಂಕಃ 05 ನೇ ಅಕ್ಟೋಬರ್ ಮಾಹೆಯ 2023 ನೇ ಇಸವಿ.**

**ಅಸಲು ದಾವಾ ಸಂಖ್ಯೆ: 74/2012**

**ವಾದಿ** : ಶ್ರೀ ವಿಶ್ವನಾಥ ಮಾದೇವ ಆಚಾರಿ

**–ವಿರುದ್ಧ–**

**ಪ್ರತಿವಾದಿಯರು** : ಶ್ರೀ ರವೀಶ ರಾಮಕೃಷ್ಣ ಹೆಗಡೆ ಹಾಗೂ ಇತರರು

**ಮಧ್ಯಕಾಲೀನ ಅರ್ಜಿ ಸಂಖ್ಯೆ 10 ರ ಪಕ್ಷಗಾರರುಗಳು**

**ಅರ್ಜಿದಾರರು** : ಶ್ರೀ ವಿಶ್ವನಾಥ ಮಾದೇವ ಆಚಾರಿ ,

**–ವಿರುದ್ಧ–**

**ಎದುರುದಾರರು** : ಶ್ರೀ ರವೀಶ ರಾಮಕೃಷ್ಣ ಹೆಗಡೆ ಹಾಗೂ ಇತರರು

*******

**ಸಿ.ಪಿ.ಸಿ. ಕ್ರಮಾದೇಶ 16 ನಿಯಮ 6 ರ ಮೇಲಿನ ಆದೇಶ.**

ವಾದಿ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ 10 ನ್ನು ಸಲ್ಲಿಸಿ 6 ನೇ ಪ್ರತಿವಾದಿ ಮೃತ ಗಂಡನಾದ ಉಮೇಶ ವೆಂಕಟಪತಿ ನಾಯ್ಕ ಈತನು ದಿನಾಂಕ 05–03–2007 ರಂದು 1, 2 ಮತ್ತು 4 ನೇ ಪ್ರತಿವಾದಿಯರಿಂದ ದಾವಾ ಸ್ಥಳದ ಸಂಬಂಧ ಮಾಡಿಕೊಂಡ ಮೂಲ

ಕ್ರಯದಸ್ತಾವೇಜನ್ನು ನ್ಯಾಯಾಲಯದಲ್ಲಿ ಹಾಜರುಪಡಿಸುವಂತೆ 6 ರಿಂದ 9 ನೇ ಪ್ರತಿವಾದಿಯರಿಗೆ ನಿರ್ದೇಶನ ನೀಡಬೇಕೆಂದು ಮನವಿ ಮಾಡಿರುತ್ತಾರೆ.

2. **ಅರ್ಜಿಯ ಸಂಕ್ಷಿಪ್ತ ಸಾರಾಂಶಃ**

ಅರ್ಜಿಯ ಪ್ರಮಾಣ ಪತ್ರಿಕೆಯನ್ನು ಪರಿಶೀಲಿಸಲಾಯಿತು. ವಾದಿಯು ತನ್ನ ಪ್ರಮಾಣಪತ್ರಿಕೆಯಲ್ಲಿ ಹೇಳುವುದೇನೆಂದರೆ, ದಾವಾ ಸ್ಥಳಕ್ಕೆ ಸಂಬಂಧಪಟ್ಟಂತೆ, 1, 2 ಮತ್ತು 4 ನೇ ಪ್ರತಿವಾದಿಯರು ದಿನಾಂಕ 05-03-2007 ರಂದು 6 ನೇ ಪ್ರತಿವಾದಿಯ ಮೃತ ಗಂಡನಾದ ಉಮೇಶ ವೆಂಕಟಪತಿ ನಾಯ್ಕ ಇತನಿಗೆ ಒಂದು ಖಂಡಿತ ಕ್ರಯದಸ್ತಾವೇಜನ್ನು ಮಾಡಿ ಅದನ್ನು ಹೊನ್ನಾವರದ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಾಯಿಸಿದ್ದು ಇರುತ್ತದೆ. ಈಗ ಪ್ರತಿವಾದಿಯು ತನ್ನ ಸಾಕ್ಷಿ ಜವಾಬಿನಲ್ಲಿ ಹೇಳಿದ ಗಡಿ ಗುರುತಿಗೂ ಮತ್ತು ಕ್ರಯದಸ್ತಾವೇಜಿನಲ್ಲಿ ನಮೂದಿಸಿದ ಗಡಿ ಗುರುತಿಗೂ ಹೊಂದಾಣಿಕೆ ಇರುವುದಿಲ್ಲ. ಆದ್ದರಿಂದ ಗಡಿ ಗುರುತನ್ನು ಪುರಾವೆ ಮಾಡಲು ಮೂಲ ಕ್ರಯದಸ್ತಾವೇಜನ್ನು ನ್ಯಾಯಾಲಯದಲ್ಲಿ ಹಾಜರುಪಡಿಸುವಂತೆ 6 ರಿಂದ 9 ನೇ ಪ್ರತಿವಾದಿಯರಿಗೆ ಸಮನ್ಸ್ ಹೊರಡಿಸಲು ಮನವಿ ಮಾಡಿರುತ್ತಾರೆ.

**3.** ಸದರಿ ಅರ್ಜಿಗೆ ಪ್ರತಿವಾದಿಯರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ ಹೇಳುವುದೇನೆಂದರೆ, ವಾದಿಯು ಈ ದಾವೆಯನ್ನು ದಿನಾಂಕ 22-06-2012 ರಂದು ದಾಖಲಿಸಿ ಅದರಲ್ಲಿ ಕ್ರಯದಸ್ತಾವೇಜನ್ನು ರದ್ದು ಮಾಡಬೇಕೆಂದು ಮಾಗಣಿ ಮಾಡಿರುತ್ತದೆ. ವಾದಿಯು, ಈ ದಾವೆಯನ್ನು ಹೂಡುವ ಕಾಲಕ್ಕೆ ಮತ್ತು ಮುಖ್ಯ ವಿಚಾರಣೆಯ ಅಫಡಿವೇಟ್ ಸಲ್ಲಿಸುವಾಗಲೂ ಸಹ ಸದರಿ ಕ್ರಯದಸ್ತಾವೇಜಿನ ದೃಢೀಕೃತ ನಕಲನ್ನು ಹಾಜರುಪಡಿಸಿ ನಿಶಾನೆಯಾಗಿ ಗುರುತಿಸಿಕೊಂಡಿರುವುದಿಲ್ಲ. ಈಗ ವಾದಿಯು ಉದ್ದೇಶ ಪೂರ್ವಕವಾಗಿ

ಪ್ರತಿವಾದಿಯ ವಾದ ಮಂಡನೆ ಕಾಲಕ್ಕೆ ವಿಳಂಬ ಮಾಡುವ ಉದ್ದೇಶದಿಂದ ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

**4.** ವಾದಿ ಮತ್ತು ಪ್ರತಿವಾದಿಯರ ಪರ ವಕೀಲರ ವಾದವನ್ನು ಆಲಿಸಿದ ನಂತರ ಈ ಅರ್ಜಿಯ ನಿರ್ಧರಣೆಗಾಗಿ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

1. ದಿನಾಂಕ 05-03-2007 ರ ಮೂಲ ಕ್ರಯ ದಸ್ತಾವೇಜನ್ನು ಹಾಜರುಪಡಿಸಲು 6 ರಿಂದ 9 ನೇ ಪ್ರತಿವಾದಿಯರಿಗೆ ಸಮನ್ಸ್ ಹೊರಡಿಸುವ ಅಗತ್ಯತೆ ಇದೆಯಾ?
2. ಯಾವ ಆದೇಶ?

**5.** ಈ ಕೆಳಕಂಡ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಮುಂದಿನಂತೆ ಉತ್ತರಿಸಿದ್ದೇನೆ

. ಅಂಶ ಸಂಖ್ಯೆ 1 – ನಕಾರಾತ್ಮಕವಾಗಿ

ಅಂಶ ಸಂಖ್ಯೆ 2 – ಮುಂದಿನ ಆದೇಶದಂತೆ.

## ಕಾರಣಗಳು

**6.** ಅಂಶ ಸಂಖ್ಯೆ 1. ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಯ ವಿರುದ್ಧ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಶಾಶ್ವತ ನಿರ್ಭಂದಕಾಜ್ಞೆ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ವಾದಿಯು ತನ್ನ ವಾದ ಪತ್ರದಲ್ಲಿ ದಿನಾಂಕ 05-03-2007 ರ ಕ್ರಯ ದಸ್ತಾವೇಜನ್ನು ಪ್ರತಿವಾದಿಯರು ಮೋಸ ಮಾಡಿ ಸೃಷ್ಟಿ ಮಾಡಿಕೊಂಡಿದ್ದಾರೆ ಎನ್ನುವುದಾಗಿ ಹೇಳಿರುತ್ತಾರೆ. ಪ್ರತಿವಾದಿಯು ತನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿ, ವಾದಿಯ ವಾದ ಪತ್ರದ ಸಂಗತಿಗಳನ್ನು ಅಲ್ಲಗಳೆದಿರುತ್ತಾರೆ. ವಾದಿಯು ಹೇಳುವಂತೆ, ಸದರಿ ಕ್ರಯ ದಸ್ತಾವೇಜನ್ನು ಹೊನ್ನಾವರದ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಿದ್ದು ಇರುವುದಾಗಿ ಹೇಳಿರುತ್ತಾರೆ. ವಾದಿಯು ತನ್ನ ವಾದ ಪತ್ರದಲ್ಲಿ ಸದರಿ ಕ್ರಯ ದಸ್ತಾವೇಜನ್ನು ರದ್ದು ಮಾಡುವಂತೆ ಮಾಗಣಿ

ಮಾಡಿದ್ಯಾಗೂ ಕೂಡ , ಇಲ್ಲಿಯವರೆಗೆ ಸದರಿ ಕ್ರಯ ಪತ್ರದ ದೃಢೀಕೃತ ನಕಲನ್ನು ಹೊನ್ನಾವರದ ಉಪನೋಂದಣಾಧಿಕಾರಿಗಳ ಕಛೇರಿಯಿಂದ ಪಡೆದುಕೊಂಡು ನ್ಯಾಯಾಲಯದ ಮುಂದೆ ಹಾಜರುಪಡಿಸದೇ ಇರುವುದು ಕಂಡು ಬರುತ್ತದೆ. ಯಾಕೆಂದರೆ ಸದರಿ ಕ್ರಯ ದಸ್ತಾವೇಜಿನ ಪ್ರತಿ ಸಾರ್ಜನಿಕ ದಾಖಲೆ ಆಗಿದ್ದು, ಅವುಗಳ ದೃಢೀಕೃತ ನಕಲುಗಳನ್ನು ಪಡೆದುಕೊಂಡು ನ್ಯಾಯಾಲಯದಲ್ಲಿ ಹಾಜರುಪಡಿಸಬಹುದಾಗಿರುತ್ತದೆ. ಒಂದು ವೇಳೆ ವಾದಿಯು ಸದರಿ ದಾಖಲೆಗಳನ್ನು ತನ್ನ ವಾದ ಸಮರ್ಥನೆಗಾಗಿ ಅತೀ ಅವಶ್ಯವಾಗಿ ಬೇಕು ಎಂದು ಪರಿಗಣಿಸಿದರೂ ಕೂಡ, ಅವುಗಳ ದೃಢೀಕೃತ ನಕಲುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದಿತ್ತು. ಆದರೆ ವಾದಿಯು ಈಗ ಪ್ರತಿವಾದಿಯ ವಾದ ಮಂಡಣೆಗೆ ಮತ್ತು ಸದರಿ ದಾವೆಗೆ ವಿಳಂಬ ಮಾಡುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದ್ದರಿಂದ ವಾದಿಯು ಕೇಳಿರುವಂತೆ ಮನವಿಯನ್ನು ಪುರಸ್ಕರಿಸಲು ಅರ್ಹನಾಗಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಅಂಶ ಸಂಖ್ಯೆ 1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ..

7. **ಅಂಶ ಸಂಖ್ಯೆ 2**: ಈ ಮೇಲ್ಕಂಡ ಕಾರಣಗಳಿಗೆ ಈ ಮುಂದಿನಂತೆ ಆದೇಶಿಸಲಾಗಿದೆ.

## ಆದೇಶ

ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-10 ನ್ನು ವಜಾ ಮಾಡಲಾಗಿದೆ.

ವೆಚ್ಚಗಳ ಬಗ್ಗೆ ಆದೇಶವಿರುವುದಿಲ್ಲ.

(ಈ ಆದೇಶವನ್ನು ಶೀಘ್ರಲಿಪಿಗಾರ್ತಿಗೆ ಗಣಕಯಂತ್ರದಲ್ಲಿ ನೇರವಾಗಿ ಗಣಕೀಕೃತ ಮಾಡಿಸಿ, ನಂತರ ಅದನ್ನು ಓದಿ ತಪ್ಪುಗಳನ್ನು ತಿದ್ದಿದ ನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕಃ 05-10-2023 ರಂದು ಘೋಷಿಸಲಾಯಿತು.)

Digitally signed by Iranna Hunashikatti Addl. Civil Judge and JMFC., Honnavar.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನ್ಯಾಯಾಲಯ, ಹೊನ್ನಾವರ.